ಈ ರಬ್ಬರ್ ತೋಟಕ್ಕೆ ೪ ಬೆಂಕಿ ವಾಚರ್‌ಗಳನ್ನು ನೇಮಿಸಲಾಗಿದೆ. ಮತ್ತು ಇವರು ಆ ಸಮಯದಲ್ಲಿ ಕೆಲಸ ಮಾಡುತ್ತಿದ್ದರು.

ಶ್ರೀ ಆರ್ಮುಗಂ ಎಂಬಾತನು ದಿನಗೂಲಿ ಕೆಲಸ ಮಾಡುತ್ತಿದ್ದು, ಈತನು ಪಕ್ಕದಲ್ಲಿ ಇರುವ ಅರಣ್ಯ ಪ್ರದೇಶದಲ್ಲಿ ಮರಗೆಣಸು ಬೆಳಸಲಿಕ್ಕೆ ಕಾಲಂ ಎಕರೆ ಪ್ರದೇಶದಲ್ಲಿ ಅಕ್ರಮವಾಗಿ ಸುಡುತ್ತಿರುವಾಗ ಬೆಂಕಿಯು ಪಕ್ಕದ ರಬ್ಬರ್ ಪ್ಲಾಂಟೇಷನ್‌ಗೆ ಹರಡಿದೆ ಎಂದು ಸಂಶಯ ಪಟ್ಟಿದೆ. ಬೆಂಕಿಯನ್ನು ಗಮನಿಸಿದ ಕೂಡಲೇ ಅಲ್ಲಿನ ಅಧಿಕಾರಿಗಳು ಕೂಲಿಗಾರರು ಸೇರಿ ಬೆಂಕಿಯನ್ನು ಆರಿಸಿದ್ದಾರೆ.

ಇದರ ಬಗ್ಗೆ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ. ತನಿಖೆಯು ಸಹ ಮುಂದುವರಿಯುತ್ತಿದೆ.

ನಿಗಮದ ಅಧಿಕಾರಿಗಳು ಈ ಬೆಂಕಿಯಿಂದ ಆದ ನಷ್ಟವನ್ನು ಮತ್ತು ಅಜಾಗರೂಕತೆಯ ಬಗ್ಗೆಯೂ ತನಿಖೆ ನಡೆಸುತ್ತಿದ್ದಾರೆ. ತನಿಖೆ ಮುಗಿದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಗೋಪಿನಾಥ ಆರ್. ಸಾಂಡ್ಯ.—(ಸದಸ್ಯರು ಹಾಜರಿರಲಿಲ್ಲ)

ಸಿ) ಮುಂಡಗೋಡ ಗ್ರಾಮದಲ್ಲಿ ವಾಸ ಮಾಡುವ ಶಿವಪ್ಪ ಈರಪ್ಪ ಅಟ್ಟಣಗಿ ಅವರ ಮನೆಯಿಂದಹತ್ತು ಚೀಲ ಬೀಜದ ಭತ್ತವನ್ನು ಜಪ್ತಿ ಮಾಡಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.— ದಿನಾಂಕ ೨೮-೩-೯೦ರಂದು ರಾತ್ರಿ ೭-೩೦, ೮-೦೦ ಗಂಟೆ ಸಮಯದಲ್ಲಿ ಮುಂಡಗೋಡ ಕಂದಾಯ ನಿರೀಕ್ಷಕರು ಶ್ರೀ ಎಂ. ಕುಂಬಾರಗೌಡ, ಶಿರಸ್ತೆದಾರ ಜಿ. ಎಂ. ಚಂದಾವರ, ಉಪ ತಹಶೀಲ್ದಾರ್ ವಿ. ಎಂ. ಪತ್ತರ್ ಇತರೆ ಸಿಬ್ಬಂದಿಗಳು ಎಂ.ಪಿ.ಇ. ೬೪೨೫ ಟ್ರಾಕ್ಟರ್ ಮೇಲೆ ಜಂಬಿ ಕೊಪ್ಪ, ಕೂರ್ಲಿ ಪೋಸ್ಟ್, ಮುಂಡಗೋಡ ಈ ಗ್ರಾಮದಲ್ಲಿ ವಾಸ ಮಾಡುವ ಶಿವಪ್ಪ ಈರಪ್ಪ ಅಟ್ಟಣಗಿ ಇವರ ಮನೆಗೆ ಅವರು ಮನೆಯಲ್ಲಿ ಇಲ್ಲದ ಸಂದರ್ಭದಲ್ಲಿ ಯಾವುದೇ ನೋಟೀಸ್ ಕೊಡದೆ (ಅವರ ತಂದೆ ಸರ್ಕಾರಕ್ಕೆ ಕೊಡಬೇಕಾದ ಬಾಕಿ ಹಣ ವಸೂಲಿ ಬಗ್ಗೆ) ಮನೆಯಲ್ಲಿದ್ದ ಅವರ ತಮ್ಮನಿಗೆ ಹೀನಾಮಾನ ಬೈದು ಹೆತ್ತ ಚೀಲ ಬೀಜಕ್ಕಾಗಿ ಇಟ್ಟಿದ್ದ ಭತ್ತವನ್ನು ತೆಗೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ಯಾವುದೇ ಮಹಜರ ಮಾಡದೆ ಕಾನೂನು ಬಾಹಿರವಾಗಿ ವರ್ತಿಸಿದ್ದಾರೆ. ಇವರ ತಂದೆ ಮತ್ತು ಇವರು ಬೇರೆ ಬೇರೆ ಊರುಗಳಲ್ಲಿ ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದು ಓಟರ್ ಲಿಸ್ಟ್‌ನಲ್ಲಿ ಹೆಸರು ಬೇರೆ ಇದೆ. ಪಡಿತರ ಕಾರ್ಡ್ ಬೇರೆ ಬೇರೆ ಇದೆ. ಇವರ ತಂದೆಯು ಸಾಲಕ್ಕೂ ಮಗನಿಗೂ ಯಾವುದೇ ಸಂಬಂಧವಿಲ್ಲದೆ ಬೇರೆ ಊರುಗಳಲ್ಲಿ ವಾಸ ಮಾಡುತ್ತಿದ್ದರು. ಊರಿನಲ್ಲಿ ಅಶಾಂತಿ ವಾತಾವರಣ ಉಂಟಾಗಿದ್ದು, ಮಾನವೀಯತೆಗೆ ಕಳಂಕ ತರುವ ಈ ಘಟನೆ ಬಗ್ಗೆ ಸರ್ಕಾರದ ಹೇಳಿಕೆಯನ್ನು ತಿಳಿಯಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಸಚಿವರು) — ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರ ಪರವಾಗಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಮುಂಡಗೋಡ ತಾಲ್ಲೂಕಿನ ಜಂಬಲಗಿ ಕಾರ್ಲಿ ವಾರಿ ಶ್ರೀ ಈರ ಶಿವನಾಯ್ಕ ಆಲಿಯಾಸ್ ಅಟ್ಟಣಗಿ ಇವರು ಸರ್ಕಾರಕ್ಕೆ ೧೯೫೫-೫೬ರಿಂದ ಭೂ ಸುಧಾರಣಾ ಕ್ರಮಿಯಂತೆ ರಖಂರೂ. ೬೦೫೭೭-೬೫ ಪೈ.ಗಳ ಬಾಕಿ ಉಳಿಸಿಕೊಂಡಿದ್ದರು. ಇದರಲ್ಲಿ ರೂ. ೧೫೦೦-೦೦ ಗಳನ್ನು ವಾಪತಿವಾಡಿ. ರೂ. ೫೯೪೭೭-೬೫ ಪೈ.ಗಳ ಬಾಕಿಯಿತ್ತು. ದಿನಾಂಕ ೨೧-೧೨-೮೮ ರಂದು ಈ ಸಂಬಂಧದಲ್ಲಿ ಬಾಕಿ ವಾಪತಿಸಲು ನೋಟೀಸು ಕೊಡಲಾಗಿದ್ದಿತು. ಸದರಿ ನೋಟೀಸನ್ನು ಅವರ ಮಗ ಶ್ರೀ ಶಿವಈರ ನಾಯ್ಕ ಆಲಿಯಾಸ್ ಅಟ್ಟಣಗಿ ಇವರು ಸ್ವೀಕರಿಸಿರುತ್ತಾರೆ. ದಿನಾಂಕ ೨೧-೩-೯೯ ರಿಂದು ವಸೂಲಾತಿ ತಂಡವು ಶ್ರೀ ಈರ ಶಿವ ನಾಯ್ಕ ಇವರನ್ನು ಭೇಟಿಯಾಗಿ ಯಾವುದೇ ಕ್ರಮ ಕೈಗೊಳ್ಳದೆ ಹಿಂದಿರುಗಲಾಯಿತು. ಪುನಃ ದಿನಾಂಕ ೨೮-೩-೯೯೦ ರಂದು ವಸೂಲಾತಿ ತಂಡವು ವಸೂಲಿಗೆ ಹೋದಾಗ ಅವರ ಮನೆಯಲ್ಲಿ ೫೦ ಕ್ವಿಂಟಾಲ್ ಭತ್ತದ ದಾಸ್ತಾನು ಇರುವುದನ್ನು ತಿಳಿದು, ಅವರಲ್ಲಿ ಕೇವಲ ಹತ್ತು ಕ್ವಿಂಟಲ್ ಭತ್ತವನ್ನು ಮಾತ್ರ ಜಪ್ತಿ ಮಾಡಲಾಯಿತು. ಈ ಬಗ್ಗೆ ಮಹಜರ್ ಮಾಡಿ ಆ ಸಮಯದಲ್ಲಿ ಹಾಜರಿದ್ದ ವ್ಯಕ್ತಿಗಳನ್ನು ವಂಹಜರಿಗೆ ಸಹಿ ಮಾಡಲು ಕೋರಿದಾಗ ಅವರು ನಿರಾಕರಿಸಿದರು. ಜಪ್ತಿಯ ಸಮಯದಲ್ಲಿ ಶುಸ್ತೀದಾರರ ಇಬ್ಬರು ಮಕ್ಕಳಾದ ಶ್ರೀಯುತ ಸುರೇಶ್ ಮತ್ತು ಚುದ್ರು ಹಾಗೂ ಶುಸ್ತೀದಾರರ ಪತ್ನಿ ಸಹ ಹಾಜರಿದ್ದರು. ಶ್ರೀ ಈರ ಶಿವ ನಾಯಕ ಇವರು ಅವರ ಆರು ಜನ ಮಕ್ಕಳೊಂದಿಗೆ

ತುಸ್ತೀದಾರರ ಮನೆಯಲ್ಲಯೇ ಒಟ್ಟಿಗೆ ವಾಸಿಸುತ್ತಿದ್ದಾರೆಂದು ತಿಳಿದುಬಂದಿದೆ. ಅಲ್ಲದೆ, ಅವರಿಗೆ ಕುರ್ಲಿ ಗ್ರಾಮದಲ್ಲಿ ಮತ್ತೊಂದು ಮನೆಯಿದ್ದು ಅದು ಹಾಳಿ ಪಾಳಿಯಿದೆ ಎಂದು ತಿಳಿದುಬಂದಿದೆ. ಈ ಜಪ್ತಿ ಕಾರ್ಯವು ದಿನಾಂಕ ೨೮-೩-೧೯೯೦ರ ಸಂಜೆ ೪-೩೦ರಿಂದ ೫-೦೦ ಗಂಟೆಯೊಳಗೆ ನಡೆದಿದ್ದು, ಜಪ್ತಿ ಮಾಡಲಾದ ಹತ್ತು ಕ್ವಿಂಟಾಲ್ ಭತ್ತವನ್ನು ತಾಲ್ಲೂಕು ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಶೇಖರಿಸಲಾಗಿದೆ.

೪ ಶಿಂಷಾ ನಾಲೆಗೆ ನೀರೊದಗಿಸುವ ಬಗ್ಗೆ

ಶ್ರೀ ಎಂ. ಎಸ್ ಆತ್ಮಾನಂದ (ಮಂಡ್ಯ).— ಮಾನ್ಯ ಅಧ್ಯಕ್ಷರೆ, ಕೆ.ಆರ್.ಎಸ್. ಅಡಿಯಲ್ಲಿನ ವಿ.ಸಿ. ನಾಲೆಯು ಅಡಿ ನೀರಿನ ವಿತರಣಾ ನಾಲೆಯು ವ್ಯಾಪ್ತಿಯಲ್ಲಿ ಶಿಂಷಾ ನಾಲೆಯು ಒಂದಾಗಿದೆ. ಈ ನಾಲೆಯ ಪರಿಸ್ಥಿತಿಯಲ್ಲಿ ಅನೇಕ ಗ್ರಾಮಗಳು ಬರುತ್ತವೆ. ಈ ನಾಲೆ ಟೇಲ್ ಎಂಡ್ ನಾಲೆ. ಈ ಗ್ರಾಮದ ರೈತರಿಗೆಗಳಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೀವ್ರ ಅಭಾವ ತಲೆದೋರಿದೆ ಈ ನೀರಿನ ಕೊರತೆ ನಿವಾರಿಸುವುದಕ್ಕೆ ಬೇರೆ ಮಾರ್ಗವು ಇರುವುದಿಲ್ಲ. ಈ ನಾಲೆಗೆ ವಿ.ಸಿ. ನಾಲೆಯಿಂದ ಒಂದು ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡಬೇಕಾದುದು ಅತೀ ಅವಶ್ಯವಾಗಿದೆ. ಈ ರೀತಿ ಬಿಡುಗಡೆ ಆದರೆ ಸಮಸ್ಯೆ ಪರಿಹಾರ ಆಗುತ್ತದೆ. ಆದುದರಿಂದ ಸನ್ಮಾನ್ಯ ಸಚಿವರನ್ನು ಶಿಂಷಾ ನಾಲೆಗೆ ನೀರು ಬಿಡುಗಡೆ ಮಾಡಲು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಖಾತೆ ಸಚಿವರು).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಮತ್ತು ಲೋಕೋಪಯೋಗಿ ಸಚಿವರುಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ಶಿಂಷಾ ನಾಲೆಯಿಂದ ಕೆಳಗಡೆ ಬರುವ ಆಯ್ಕೆಕಟ್ಟಿಗೆ ಬೇಸಗೆಯಲ್ಲಿ ನೀರು ಬಿಡುವ ಕಾರ್ಯಕ್ರಮವು ಕರ್ನಾಟಕ ನೀರಾವರಿ ಕಾಯಿದೆ, ೧೯೬೫ರಂತೆ ಹೊರಡಿಸಿರುವ ಪ್ರಕಟಣೆಯಲ್ಲಿ ಸೇರಿರುವುದಿಲ್ಲ. ವಿಶ್ವೇಶ್ವರಯ್ಯ ನಾಲೆಯ ಜಿನುಗು ನೀರು ಶಿಂಷಾ ನಾಲೆಗೆ ಹರಿದು ಬರುತ್ತಿದ್ದರೆ, ಅದನ್ನು ರೈತರು ಉಪಯೋಗಿಸಿಕೊಳ್ಳುತ್ತಿರಬಹುದು. ಆದರೂ ಸಹಾ, ಈ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೆಂದು ಮಾನ್ಯ ಶಾಸಕರು ಸೂಚಿಸಿರುವುದರಿಂದ, ಕುಡಿಯುವ ನೀರಿಗಾಗಿ ವಿಶ್ವೇಶ್ವರಯ್ಯ ನಾಲೆಯಿಂದ ಶಿಂಷಾ ನಾಲೆಗೆ ನೀರು ಬಿಡುವ ಬಗ್ಗೆ ಪರಿಶೀಲಿಸಲಾಗುವುದು.

೫ ದ.ಕ. ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿರುವ ನರಹರಿ ಬೆಟ್ಟವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಕುರಿತು

ಶ್ರೀ ರುಕ್ಮಯ್ಯ ಪೂಜಾರಿ (ಬಿಟ್ಟಾ).— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಪಂಂಗಳೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಪಕ್ಕ ಬೋಳಂಗಡಿ ಎಂಬಲ್ಲಿ ಒಂದು ಎತ್ತರವಾದ ನರಹರಿ ಪರ್ವತವಿದೆ. ಈ ಬೆಟ್ಟದ ಮೇಲೆ ಬಹಳ ಪುರಾತನವಾದ ನರಹರಿ ದೇವಸ್ಥಾನವಿದೆ. ಈಗ ಅದರ ಜೀರ್ಣೋದ್ಧಾರ ಕೆಲಸ ನಡೆಯುತ್ತಾ ಇದೆ. ಮಹಾ ಭಾರತ ಕಾಲದಲ್ಲಿ ಪಾಂಡವರು ಆ ಬೆಟ್ಟಕ್ಕೆ ಭೇಟಿ ಕೊಟ್ಟಿದ್ದಾರೆ ಎಂಬುದಾಗಿ ಪ್ರತೀತಿ ಇದೆ. ಅದಕ್ಕೆ ಸರಿಯಾಗಿ ಕಪ್ಪು ಕಲ್ಲಿನ ಮೇಲೆ ಹೆಸರಿಗೆ ತಕ್ಕಂತೆ ಶಂಕ ಚಕ್ರ ಗದಾ ಪದ್ಮ ಎಂಬ ನಾಲ್ಕು ಕೆರೆಗಳಿವೆ. ಅಲ್ಲಿ ಸೋಣ ಅಮಾವಾಸ್ಯೆ ಆಟಿ ಅಮಾವಾಸ್ಯೆ ಸಮಯದಲ್ಲಿ ಭಕ್ತರು ತೀರ್ಥ ಸ್ನಾನ ಮಾಡಿ ದೇವರ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. ಹಾಗೆಯೇ ಸಾಮಾನ್ಯವಾಗಿ ಡಿಸೆಂಬರ್ ತಿಂಗಳಲ್ಲಿ ಅಲ್ಲಿ ಲಕ್ಷ ದೀಪೋತ್ಸವ ಸಹ ನಡೆಯುತ್ತದೆ. ಬೆಟ್ಟದ ಮೇಲೆ ನಿಂತು ಸುತ್ತ ನೋಡಿದಾಗ ಅತ್ಯಂತ ಸುಂದರವಾದ ದೃಶ್ಯ ನಮಗೆ ಕಾಣುತ್ತದೆ. ಮತ್ತು ಅದು ರಾಷ್ಟ್ರೀಯ ಹೆದ್ದಾರಿಯ ಪಕ್ಕ ಇರುವುದರಿಂದ ಜನರಿಗೆ ಹೋಗಿ ಬರಲು ಕೂಡ ತುಂಬಾ ಅನುಕೂಲವಾಗುತ್ತದೆ. ಇವೆಲ್ಲಾ ದೃಷ್ಟಿಯಿಂದ ಈ ನರಹರಿ ಬೆಟ್ಟವನ್ನು ಒಂದು ಸುಂದರವಾದ ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು ಅತೀ ಸೂಕ್ತ ಎಂಬುದಾಗಿ ಮಾನ್ಯ ಪ್ರವಾಸೋದ್ಯಮ ಸಚಿವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಪ್ರವಾಸೋದ್ಯಮ ಸಚಿವರು).— ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಬಂಟ್ವಾಳ ತಾಲ್ಲೂಕಿನ ಬೆಟ್ಟದ ಬಗ್ಗೆ ಏನು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಅದು ಅತ್ಯುತ್ತಮವಾದ ಪ್ರವಾಸಿ ಕೇಂದ್ರವಾಗುವುದಕ್ಕೆ ಸಾಧ್ಯವಿದೆ. ಈಗಾಗಲೇ ಪ್ರವಾಸೋದ್ಯಮ